ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ:ಬಿಟಿಇ/03/ಇಸಿಎಸ್(1)/2025

ಆಯುಕ್ತರವರ ಕಛೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು-560001
ದಿನಾಂಕ:23.04.2025

**ಜ್ಞಾಪನ**

ವಿಷಯ: ಏಪ್ರಿಲ್/ಮೇ 2025ರ ಡಿಪ್ಲೋಮ ಸೆಮಿಸ್ಟರ್ ಥಿಯರಿ ಪರೀಕ್ಷೆಗೆ ಪ್ರಶ್ನೆಪತ್ರಿಕೆಗಳನ್ನು ಮುದ್ರಿಸುವ ಬಗ್ಗೆ.
ಉಲ್ಲೇಖ: ಈ ಕಛೇರಿ ಸುತ್ತೋಲೆ: ಬಿಟಿಇ 03/ಇಸಿಎಸ್(1) 2025 ದಿ:22.04.2025

*************

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖದ ಈ ಕಛೇರಿ ಸುತ್ತೋಲೆಯನ್ವಯ ಏಪ್ರಿಲ್/ಮೇ 2025 ರ ಡಿಪ್ಲೋಮ ಸೆಮಿಸ್ಟರ್ C-15 ಪಠ್ಯಕ್ರಮದ ಥಿಯರಿ ವಿಷಯಗಳ ಪರೀಕ್ಷೆಗಳನ್ನು ದಿನಾಂಕ:28.04.2025 ರಿಂದ ಸರ್ಕಾರಿ ಪಾಲಿಟೆಕ್ನಿಕ್ ಗಳಲ್ಲಿ ಮಾತ್ರ ಮತ್ತು C-20 ಪಠ್ಯಕ್ರಮದ ಥಿಯರಿ ವಿಷಯಗಳ ಪರೀಕ್ಷೆಗಳನ್ನು ದಿನಾಂಕ:05.05.2025 ರಿಂದ ಸರ್ಕಾರಿ, ಖಾಸಗಿ ಅನುದಾನಿತ & ಖಾಸಗಿ ಪಾಲಿಟೆಕ್ನಿಕ್ ಪರೀಕ್ಷಾ ಕೇಂದ್ರಗಳಲ್ಲಿ ನಡೆಸಲು ಕ್ರಮಕೈಗೊಳ್ಳಲಾಗಿದೆ. ಸದರಿ ಪರೀಕ್ಷೆಯ ಪ್ರಶ್ನೆಪತ್ರಿಕೆಗಳನ್ನು ಬಿಟಿಇ ಲಿಂಕ್ಸ್ ವೆಬ್ ಪೋರ್ಟಲ್ ಮೂಲಕ ಆನ್ ಲೈನ್ ನಲ್ಲಿ ಡೌನ್ ಲೋಡ್ ಮಾಡಿ ಮುದ್ರಿಸಿ, ಸಮರ್ಪಕವಾಗಿ ವಿತರಿಸಿ ಪರೀಕ್ಷೆಗಳನ್ನು ನಡೆಸಬೇಕಾಗಿರುತ್ತದೆ.

ಪ್ರಯುಕ್ತ ಸಂಬಂಧಪಟ್ಟ ಪಾಲಿಟೆಕ್ನಿಕ್ ಪರೀಕ್ಷಾ ಕೇಂದ್ರಗಳ ಪ್ರಾಚಾರ್ಯರುಗಳು ಮಾತ್ರ ಕಡ್ಡಾಯವಾಗಿ ಪ್ರತಿದಿನ ಪರೀಕ್ಷೆ ಪ್ರಾರಂಭವಾಗುವ ಪ್ರತಿ ಸೆಷನ್ ಗಳ 01 ಗಂಟೆ ಮುಂಚಿತವಾಗಿ **"BTELinx User Forum" telegram group** ನಲ್ಲಿ **VC** ಗೆ ಸೇರ್ಪಡೆಗೊಂಡು ಕಾಲಕಾಲಕ್ಕೆ ನೀಡುವ ಸೂಚನೆಗಳನ್ನು ಅನುಸರಿಸಿ ಪರೀಕ್ಷೆಗಳನ್ನು ಸಮರ್ಪಕವಾಗಿ ನಡೆಸಲು ಕ್ರಮಕೈಗೊಳ್ಳುವಂತೆ ತಿಳಿಸಲಾಗಿದೆ.

ಸದರಿ **telegram group**ನ **VC** ಗೆ ಥಿಯರಿ ಪರೀಕ್ಷೆ ನಡೆಯುತ್ತಿರುವ ಕೇಂದ್ರಗಳ ಪ್ರಾಂಶುಪಾಲರುಗಳ ಹೊರತಾಗಿ ಬೇರೆ ಇನ್ಯಾರು ಕೂಡ ಸೇರ್ಪಡೆಯಾಗಬಾರದೆಂದು ತಿಳಿಸಲಾಗಿದೆ. ಈ ವಿಷಯದಲ್ಲಿ ಯಾವುದೇ ಗೊಂದಲ / ಲೋಪದೋಷಗಳು ಉಂಟಾಗದಂತೆ ಕ್ರಮವಹಿಸಲು ಹಾಗೂ ಪರೀಕ್ಷಾ ಗೌಪ್ಯತೆ ಮತ್ತು ಪಾವಿತ್ರ್ಯತೆ ಕಾಪಾಡಿಕೊಂಡು ಪರೀಕ್ಷೆಗಳನ್ನು ನಡೆಸಲು ಸೂಚಿಸಲಾಗಿದೆ.

ಮುಂದುವರೆದು ಪ್ರಶ್ನೆಪತ್ರಿಕೆಗಳನ್ನು Online ಮುದ್ರಿಸಿದ ಬಗ್ಗೆ, QP Code, Total Quantity Printed (Count), Room wise Distributed Count, Balance Count ಈ ಎಲ್ಲಾ ಮಾಹಿತಿಗಳನ್ನು QP Register (ವಹಿ)ಯಲ್ಲಿ ನಿರ್ವಹಿಸಿ (Format-13) ಬಾಹ್ಯ ಪರಿವೀಕ್ಷಕರು, ಪ್ರಶ್ನೆಪತ್ರಿಕೆ ಭದ್ರತಾ ಅಧಿಕಾರಿ ಮತ್ತು ಪ್ರಾಂಶುಪಾಲರು ಒಟ್ಟಾಗಿ ಪ್ರಶ್ನೆಪತ್ರಿಕೆ ಲೆಕ್ಕ ಇಡುವಂತೆ ತಿಳಿಸಲಾಗಿದೆ.

ಕಾರ್ಯದರ್ಶಿ

ಇವರಿಗೆ,
ಎಲ್ಲಾ ಸರ್ಕಾರಿ, ಖಾಸಗಿ ಅನುದಾನಿತ & ಖಾಸಗಿ ಪಾಲಿಟೆಕ್ನಿಕ್ ಪಾಲಿಟೆಕ್ನಿಕ್ ಗಳ ಪ್ರಾಚಾರ್ಯರು /ಮುಖ್ಯ ಅಧೀಕ್ಷಕರುಗಳಿಗೆ- ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ

ಪ್ರತಿ: 1. ಶ್ರೀ ಹರೀಶ ಶೆಟ್ಟಿ, ಪ್ರಾಂಶುಪಾಲರು, ಕರ್ನಾಟಕ ಸರ್ಕಾರಿ ಪಾಲಿಟೆಕ್ನಿಕ್, ಮಂಗಳೂರು- ಮಾಹಿತಿಗಾಗಿ
2.ಇ-ಗವರ್ನೆನ್ಸ್ ವಿಭಾಗ – ವೆಬ್ ಸೈಟ್ ನಲ್ಲಿ ಪ್ರಕಟಿಸಲು
3. ಗಣಕ ಕೇಂದ್ರ – ಬಿಟಿಇಲಿಂಕ್ಸ್ ವೆಬ್ ಪೋರ್ಟಲ್ ನಲ್ಲಿ ಪ್ರಕಟಿಸಲು ಮತ್ತು ಅಗತ್ಯಕ್ರಮಕ್ಕಾಗಿ
4. ಆಯುಕ್ತರ ಆಪ್ತಶಾಖೆ -ಅವಗಾಹನೆಗಾಗಿ
5. ನಿರ್ದೇಶಕರ ಆಪ್ತಶಾಖೆ -ಅವಗಾಹನೆಗಾಗಿ